ವಿಷಯ :– ಹನಗುಂದ ತಾಲೂಕಿನಲ್ಲಿ ನಳದ ಮೂಲಕ ನೀರು ಸರಬರಾಜು ಯೋಜನೆ ಕುರಿತು.

ಪ್ರ. 83(188) ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದ್‌ಗುಡ್ಡ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಹುನಗುಂದ್ ತಾಲ್ಲೂಕಿನಲ್ಲಿಯ ಕಮತ್‌ಗಿ ಗ್ರಾಮದಲ್ಲಿ ನಳದ ಮೂಲಕ ನೀರು ಸರಬರಾಜು ಮಾಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆಯೆ ;

ಆ. ಹಾಗಿದಲ್ಲಿ ಆದರ ವಿವರಗಳೇನು ;

ಇ. ಹಾಗಿಲ್ಲದಿದ್ದಲ್ಲಿ ಕೂಡಲೇ ಪ್ರಾರಂಭಿಸುವ ವಿಚಾರ ಸರಕಾರದವರಿಗಿದೆಯೋ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು) :—

ಅ. —ಹೌದು—

ಆ. ಕಮತ್‌ಗಿ ಪಟ್ಟಣದ ಕೊಳವೆ ನೀರು ಸರಬರಾಜು ಯೋಜನೆಯ ಅಂದಾಜು 13,00 ಲಕ್ಷ ರೂ. ಗಳಿಗೆ ಸಿದ್ಧಪಡಿಸಲಾಗಿದೆ. ಈ ಅಂದಾಜಿಗೆ ಆಡಳಿತ ಮಂಜೂರಾತಿಯೂ ಏಪ್ರಿಲ್ 1980ರಲ್ಲಿ ದೊರೆತ್ತಿದ್ದು ಯೋಜನೆಯು ಪ್ರಗತಿಯ ದಿಶೆಯಲ್ಲಿದೆ. ಇಲ್ಲಿಯವರೆಗೆ ರೂ. 9,32,474 ವೆಚ್ಚವಾಗಿದೆ.

ಇ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :– ಸರಕಾರಿ ಜಮೀನನ್ನು ಜನರಿಗೆ ಮಂಜೂರಾತಿ ಮಾಡಿರುವುದು

ಪ್ರ. 84 (162) ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) ಮಾನ್ಯ ಕಂದಾಯ ಮಂತಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸರಕಾರಿ ಜಮೀನನ್ನು 1981–82–83 ರಲ್ಲಿ ಎಷ್ಟು ಜನರಿಗೆ ಮಂಜೂರಾತಿ ಮಾಡಿ ಪಟ್ಟ ಕೊಡಲಾಗಿದೆ ?

ಶ್ರೀ ವಿ.ಎಲ್. ಪಾಟೀಲ್ (ಮಾನ್ಯ ಕಂದಾಯ ಸಚಿವರು) :—

ಅ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ 1981–82 ಮತ್ತು 82–83ರಲ್ಲಿ ಈ ಕೆಳಕಂಡಂತೆ ಸರ್ಕಾರಿ ಜಮೀನನ್ನು ಮಂಜೂರು ಮಾಡಲಾಗಿದೆ.

	ಮಜೂರಾತಿ ವಿವರ	1981–82ರಲ್ಲಿ		1982–83ರಲ್ಲಿ	
		ಜನ	ವಿಸ್ತೀರ್ಣ	ಜನ	ವಿಸ್ತೀರ್ಣ
1)	ಪರಿಶಿಷ್ಟಜಾತಿ ಜನಾಂಗ	91	241-16	79	243-30
2)	ಇತರರಿಗೆ	17	106-11	1	4-00
	ಒಟ್ಟು ಜಮೀನು ಮಂಜೂರಿ	108	347-27	80	247-30
1)	ಮಂಜೂರಾತಿ ಪಡೆದವರಲ್ಲಿ ಪಟ್ಟ ಪಡೆದವರು	103		48	
2)	ಪಟ್ಟ ಪಡೆಯ ಬೇಕಾದವರು	5		32	

ಶ್ರೀ ಎಂ.ಎಸ್. ಕೃಷ್ಣನ್ ;— ಸ್ವಾಮಿ, ನಾನು 334ರ ಮೇರೆಗೆ ನೋಟೀಸ್‌ಗಳನ್ನು ಕಳುಹಿಸಿದ್ದೇನೆ.

ಶ್ರೀ ಪಿ. ರಾಮದೇವ್.—ನಾವು ಒಟ್ಟು 35 ಜನ ಶಾಸಕರು ಹಕ್ಕುಚ್ಯುತಿ ನಿರ್ಣಯವನ್ನು ಕಳುಹಿಸಿದ್ದೇವೆ ; ಪ್ರಶ್ನೋತ್ತರದ ನಂತರ ದಯವಿಟ್ಟು ಅದನ್ನು ಎತ್ತಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.